ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ.

(2328) ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ರಾಜ್ಯದಲ್ಲಿರುವ ಪುರಸಭೆ ಮತ್ತು ನಗರಸಭೆ ಹಾಗೂ ಮಂಡಳಿಗಳಲ್ಲಿನ ಪೌರಕಾರ್ಮಿಕರು ಚರಂಡಿ, ಕೊಚ್ಚೆಗುಂಡಿಗಳಿಂದ ಕೊಳೆತ ಕಸವನ್ನು ತೆಗೆದುಹಾಕುವ ಕಾರ್ಯನಿರ್ವಹಿಸುವುದರಿಂದ ಅವರ ಆರೋಗ್ಯ ಹದಗೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಇದನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಇ) ಆರೋಗ್ಯ ಹದಗೆಟ್ಟು ಅಕಾಲಿಕ ಮರಣಕ್ಕೆ ತುತ್ತಾದರೆ ಅವರ ಕುಟುಂಬಕ್ಕೆ ಸರ್ಕಾರವು ಕೊಡುತ್ತಿರುವ ಪರಿಹಾರವೇನು ?

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ನಿಯಮದ ಪ್ರಕಾರ ಎಲ್ಲಾ ಸೌಲಭ್ಯಗಳನ್ನು ಕೊಡಲಾಗುತ್ತಿದೆ.

ಹರಿಜನ ಗಿರಿಜನ ಹಕ್ಕು ಬಾಧ್ಯತೆಗಳನ್ನು ಕಾಪಾಡುವ ಬಗ್ಗೆ

(2329) ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಗೃಹ ಮತ್ತು ಅಬ್ಕಾರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ರಾಜ್ಯದಲ್ಲಿ ಹರಿಜನ ಗಿರಿಜನರಿಗೆ ಕೊಡತಕ್ಕ ಮೀಸಲಾತಿಯ ಉಲ್ಲಂಘನೆ ಮಾಡಿದವರ ಮೇಲೆ ಕ್ರಮ ಕೈಗೊಳ್ಳಲು ಗೃಹ ಇಲಾಖೆಯಲ್ಲಿ ಒಂದು ವಿಶೇಷ ಶಾಖೆಯಿರುವುದು ನಿಜವೆ , ಹಾಗಿದ್ದಲ್ಲಿ ಇದುವರೆವಿಗೆ ದಾಖಲಾದ ಪ್ರಕರಣಗಳೆಷ್ಟು ;

ಆ) ಈ ಶಾಖೆಯು ಸ್ವತಃ ಇಲಾಖೆಯನ್ನು ಪರಿಶೀಲಿಸಿ ಹರಿಜನ, ಗಿರಿಜನರ ಮೀಸಲಾತಿಯಲ್ಲಿ ಉಲ್ಲಂಘನೆ ಮಾಡಿದವರ ಮೇಲೆ ದಾಖಲು ಮಾಡಿದ ಪ್ರಕರಣಗಳೆಷ್ಟು ;

ಇ) ಇವರು ದಾಖಲು ಮಾಡಿರುವ ಪ್ರಕರಣಗಳಲ್ಲಿ ಯಾರಿಗಾದರೂ ಶಿಕ್ಷೆ ಆಗಿರುವುದೆ ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು)-

ಅ) ಗೃಹ ಇಲಾಖೆಯಲ್ಲಿ ವಿಶೇಷ ಶಾಖೆ ಇರುವುದಿಲ್ಲ. ಆದರೆ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಆಡಳಿತ ನಿಯಂತ್ರಣದಲ್ಲಿ ನಾಗರೀಕ ಹಕ್ಕು ಸಂರಕ್ಷಣಾಘಟಕವು ಕಾರ್ಯನಿರ್ವಹಿಸುತ್ತಿದೆ. (ಸಿ.ಆರ್.ಇ.ಸೆಲ್.ಸಿಐಡಿ) ಈ ಘಟಕದಲ್ಲಿ ಹೆಚ್ಚಾಗಿ ಪೋಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಘಟಕಕ್ಕೆ ಮೀಸಲಾತಿ ಉಲ್ಲಂಘನೆಗೆ ಸಂಬಂಧಿಸಿದಂತೆ ದೂರುಗಳು ಬಂದಾಗ ಅಂಥಾ ಪ್ರಕರಣಗಳ ತನಿಖೆ ನಡೆಸಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿಯನ್ನು ಕಳುಹಿಸಲಾಗುತ್ತದೆ.

ಆ) ಈ ಘಟಕದಲ್ಲಿ ಹರಿಜನ ಗಿರಿಜನ ಮೀಸಲಾತಿಯಲ್ಲಿ ಉಲ್ಲಂಘನೆ ಮಾಡಿದ ಬಗ್ಗೆ ಬಂದ ದೂರುಗಳ ತನಿಖೆ ಬಾಕಿ ಇರುವುದಿಲ್ಲ ಹಾಗೂ ಮೀಸಲಾತಿ ಉಲ್ಲಂಘನೆ ದೂರುಗಳೂ ರಿಜಿಸ್ಟರ್ ಆಗಿ ಬಾಕಿ ಉಳಿದಿಲ್ಲ.

ಇ) ಉದ್ಭವಿಸುವುದಿಲ್ಲ.